ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಹಾಗೂ ಎಫ್.ಟಿ.ಎಸ್.ಸಿ-1, ಹಾವೇರಿ
**ಎಸ್.ಸಿ.18/2020**

PW- 02

CW-01

| | |
|---|---|
| ಸಾಕ್ಷಿದಾರರ ಹೆಸರುಃ | ರಾಮನಾಥ ಚೌದರಿ |
| ತಂದೆ ಹೆಸರುಃ | ವಿಟ್ಟಪ್ಪ |
| ವಯಸ್ಸುಃ | 67 ವರ್ಷ |
| ಉದ್ಯೋಗಃ | ವ್ಯವಸಾಯ |
| ಹಾಲಿ ವಾಸ ಸ್ಥಳಃ | ಬನವಾಸಿ ತಾಃ ಶಿರಸಿ |

ದಿನಾಂಕ**: 20.04.2024** ರಂದು ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.
ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಮೃತ ಶಾಂತಾಬಾಯಿ ನನ್ನ ಅಕ್ಕ. ನನ್ನ ಅಕ್ಕಳಿಗೆ ಚಾಸಾ-8 ರಿಂದ 12 ಒಟ್ಟು 5 ಜನ ಮಕ್ಕಳು. ಮೃತ ಶಾಂತಾಬಾಯಿ ಶಿಗ್ಗಾಂವ ಪಟ್ಟಣದ ಹಳೆಪೇಟೆ ತಮ್ಮ ಸ್ವಂತ ಮನೆಯಲ್ಲಿ ಒಬ್ಬಳೇ ವಾಸಿಸುತ್ತಿದ್ದಳು. ಮೃತ ನನ್ನ ಅಕ್ಕನ ಗಂಡ 2012 ರಲ್ಲಿ ತೀರಿಕೊಂಡಿರುತ್ತಾಳೆ. ಮೃತ ನನ್ನ ಅಕ್ಕನ 5 ಮಕ್ಕಳ ಪೈಕಿ 4 ಜನ ಗಂಡು ಮಕ್ಕಳಿಗೆ ಮದುವೆಯಾಗಿದ್ದು ಪ್ರತ್ಯೇಕವಾಗಿ ವಾಸವಾಗಿದ್ದಳು. ನನ್ನ ಅಕ್ಕನ ಒಬ್ಬಳೇ ಮಗಳನ್ನು ಚಾಸಾ-12 ಇವಳು ಶಿಕಾರಿಪುರಕ್ಕೆ ಮದುವೆಯನ್ನು ಮಾಡಿಕೊಟ್ಟಿದ್ದು ಅವಳು ಗಂಡನ ಮನೆಯಲ್ಲಿ ವಾಸವಾಗಿದ್ದಳು. ನಾನು ಮತ್ತು ಚಾಸಾ-8 ರಿಂದ 12 ರವರು ನನ್ನ ಅಕ್ಕನ ಮನೆಗೆ ಆಗಾಗ ಹೋಗಿ ಬಂದು ಮಾಡುತಿದ್ದೆವು.

ತಾಃ 15.08.2019 ರಂದು ರಾಖಿ ಹಬ್ಬದ ನಿಮಿತ್ತ ನನಗೆ ಕರೆ ಮಾಡಿ ಶುಭಾಷಯ ತಿಳಿಸಿ ಕೊನೆಯ ಬಾರಿ ಮಾತನಾಡಿದ್ದಳು. ತಾಃ 17.08.2019 ರಂದು ಬೆಳಿಗ್ಗೆ ಸುಮಾರು 8.30 ಕ್ಕೆ ಮೃತ ನನ್ನ ಅಕ್ಕನ ಮಗ ಚಾಸಾ-8 ನನಗೆ ಕರೆ ಮಾಡಿ ನನ್ನ ಅಕ್ಕನಿಗೆ ಹೃದಯಾಘಾತವಾಗಿ ತೀರಿಕೊಂಡಿರುತ್ತಾಳೆಂದು ಹೇಳಿದರು. ನಾನು ವಿಷಯ ಗೊತ್ತಾಗಿ ನಾನು ಮತ್ತು ನನ್ನ ಇನ್ನೊರ್ವ ಸಹೋದರ ಮತ್ತು ಕುಟುಂಬ ಸಮೇತ ಶಿಗ್ಗಾಂವ ಹಳೇಪೇಟೆಯ ನನ್ನ ಮೃತ ಅಕ್ಕನ ಮನೆಗೆ ಹೋದೆವು. ನನ್ನ ಅಕ್ಕನ ಮನೆಯ ಮುಂದೆ ಮತ್ತು ಒಳಗಡೆ ಸಾಕಷ್ಟು ಜನ ಸೇರಿದ್ದರು. ನಾನು ಮನೆಯ ಒಳಗಡೆ ಹೋಗಿ ನೋಡಲಾಗಿ ನನ್ನ ಮೃತ ಅಕ್ಕನ ಶವ ಮಂಚದ ಮೇಲೆ ಇದ್ದು ಅವಳ ಕೈಗಳನ್ನು ಸೀರೆಯಿಂದ ಹಿಂದೆಯಿಂದ ಕಟ್ಟಿದ್ದು, ನನ್ನ ಅಕ್ಕಳ ಬಟ್ಟೆ ಅಸ್ತವ್ಯಸ್ತವಾಗಿದ್ದು, ಅವಳ ಕಣ್ಣುಗಳಿಗೆ ಮತ್ತು ಕುತ್ತಿಗೆಗೆ ಸೀರೆಯಿಂದ ಬಿಗಿಯಲಾಗಿದ್ದು, ಎರಡು ತಲೆದಿಂಬುಗಳು ಶವದ ಅಕ್ಕಪಕ್ಕ ಬಿದ್ದಿದ್ದವು. ಸದರಿ ತಲೆ ದಿಂಬುಗಳ ಮೇಲೆ ರಕ್ತದ ಕಲೆಗಳಾಗಿದ್ದವು. ನನ್ನ ಅಕ್ಕಳ ಎರಡು ಗಲ್ಲಗಳ ಬೆರಳುಗಳು ಒತ್ತಿದ ಗುರುತುಗಳು ಇದ್ದವು. ನನ್ನ ಅಕ್ಕನ ಬಾಯಿಂದ ರಕ್ತ ಸೂಸಿತ್ತು. ನನ್ನ ಅಕ್ಕಳ ಶವವನ್ನು ನೋಡಿದಾಗ ಉಸಿರುಗಟ್ಟಿಸಿ ಅವಳನ್ನು ಕೊಲೆ ಮಾಡಿದ ಬಗ್ಗೆ ಕಂಡು ಬಂದಿತು. ನನ್ನ ಅಕ್ಕ ಸ್ವೆಟರ್ ಧರಿಸುತ್ತಿದ್ದಳು. ಮೃತ ನನ್ನ ಅಕ್ಕನ ಮೈ ಮೇಲೆ ಬಂಗಾರದ ಆಭರಣಗಳನ್ನು ಧರಿಸುತ್ತಿದ್ದಳು. ( ಈ ಹಂತದಲ್ಲಿ ಸಾಕ್ಷಿಯು ಸಮಯಾವಕಾಶ ಕೇಳಿದ್ದರಿಂದ ಸಮಯಾವಕಾಶ ನೀಡಲಾಯ್ತು. )

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ

PW- 02

CW-01

ದಿನಾಂಕ: **15.06.2024** ರಂದು ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:

ನಾನು ನನ್ನ ಅಕ್ಕನ ಶವವನ್ನು ನೋಡಿದಾಗ ಅವಳು ಸಾಮಾನ್ಯವಾಗಿ ಧರಿಸಿಸುತ್ತಿದ್ದ ಅವಳ ಆಭರಣಗಳಾದ 6 ಬಂಗಾರದ ಬಳೆಗಳು, ಒಂದು ಲಾಕೇಟ ಇರುವ ಬಂಗಾರದ ಚೈನ್ ಸರ ಕಾಣಲಿಲ್ಲ. ನಾನು ಸ್ಥಳದಲ್ಲಿಯ ಸ್ಥಿತಿಗತಿ ನೋಡಿ ನನ್ನ ಅಕ್ಕನ ಬಂಗಾರದ ಆಬರಣಗಳಿಗಾಗಿ ಅವಳನ್ನು ಆಭರಣಗಳಿಗಾಗಿ ಕೊಲೆ ಮಾಡಿ, ಅವುಗಳನ್ನು ತೆಗೆದುಕೊಂಡು ಹೋಗಲಾಗಿತ್ತು ಎಂದು ಕಂಡು ಬಂದಿತು. ನಂತರ ಸ್ಥಳಕ್ಕೆ ಪೋಲಿಸರು ಬಂದರು. ನನ್ನ ಅಕ್ಕನ ಕೊಲೆಯ ಪಂಚನಾಮೆ ಮಾಡಿದರು. ಪೋಲಿಸರು ನನ್ನ ಅಕ್ಕನ ಕೈ ಮತ್ತು ಕಣ್ಣುಗಳನ್ನು ಕಟ್ಟಿದ್ದನ್ನು ನೋಡಿದರು. ಪೋಲಿಸರು ದಿಂಬಿನಿಂದ ಉಸಿರುಗಟ್ಟಿಸಿ ಸಾಯಿಸಿರುವುದನ್ನು ನೋಡಿದರು. ಪೋಲಿಸರು 1 1/2 ತಾಸಿನವರೆಗೆ ಪರಿಶೀಲನೆ ಮಾಡಿದರು. ನಂತರ ನನ್ನ ಅಕ್ಕನ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಪೋಲಿಸರು ತೆಗೆದುಕೊಂಡು ಹೋದರು. ಮರಣೋತ್ತರ ಪರೀಕ್ಷೆಯ ನಂತರ ಶವವನ್ನು ಮನೆಗೆ ಬಂದಿತು. ಮುಂದೇನಾಯ್ತು ಎನ್ನುವ ಅಭಿಯೋಜಕರ ಪ್ರಶ್ನೆಗೆ ಸಾಕ್ಷಿಯು ಮೌನವಾಗಿರುತ್ತಾನೆ. (ಈ ಹಂತದಲ್ಲಿ ಸಾಕ್ಷಿಯು ಅಭಿಯೋಜಕರ ಪ್ರಶ್ನೆಗೆ ನಿರುತ್ತರವಾಗಿ ನಿಂತಿರುವುದರಿಂದ ಸುಧಾರಿಸಿಕೊಳ್ಳಲು ವಿಶ್ರಾಂತಿ ನೀಡಿ ಪುನಃ ಕಟಕಟೆಗೆ ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯ್ತು.)

ಸಾಕ್ಷಿಗೆ ತಾ:14.09.2023 ರಂದು ನ್ಯಾಯಾಲಯ ಮದ್ಯಂತರ ಆದೇಶದ ಮೇರೆಗೆ ಬಿಡುಗಡೆ ಮಾಡಿದ ಆಭರಣಗಳನ್ನು ತೋರಿಸಿದಾಗ ಸದರಿ ಆಬರಣಗಳನ್ನು ಗುರುತಿಸಿ ಸದರಿ ಆಭರಣಗಳು ತನ್ನ ಅಕ್ಕನ ಮೈ ಮೇಲಿದ್ದ ಆಭರಣಗಳು ಹಾಗೂ ಸಾಮಾನ್ಯವಾಗಿ ಅವಳು ಧರಿಸುತ್ತಿದ್ದಳು ಎಂದು ನುಡಿಯುತ್ತಾರೆ. ಸಾಕ್ಷಿಯು ಆಭರಣಗಳನ್ನು ಗುರುತಿಸಿದ್ದರಿಂದ ಎರಡು ದೊಡ್ಡ ಗಾತ್ರದ ಬಳೆಗಳನ್ನು ಮುಮಾ-1 ಎಂದು, 4 ಸಣ್ಣ ಗಾತ್ರದ ಬಳೆಗಳನ್ನು ಮುಮಾ-2 ಎಂದು, ಒಂದು ಲಾಕೇಟ ಇರುವ ಬಂಗಾರದ ಸರವನ್ನು ಮುಮಾ-3 ಎಂದು ಗುರುತಿಸಲಾಯ್ತು. ಮುಂದೇನಾಯ್ತು ಎಂಬುದು ನನಗೆ ಗೊತ್ತಾಗುತ್ತಿಲ್ಲ. ಸಾಕ್ಷಿಯು ಅಭಿಯೋಜಕರ ಪ್ರಶ್ನೆಗೆ ನಿರುತ್ತರವಾಗಿ ನಿಂತಿದ್ದು, ಪ್ರಕರಣದ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಮೃತ ಶಾಂತಾಬಾಯಿ

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ)

ಪಾಟೀ ಸವಾಲು: ಸರ್ಕಾರಿ ಅಭಿಯೋಜಕರಿಂದ:

ನಾನು ಘಟನೆ ಬಗ್ಗೆ ತಿಳಿದುಕೊಂಡ ನಂತರ ಮದ್ಯಾಹ್ನ 12.00 ಗಂಟೆಗೆ ಅದೇ ದಿನ ಶಿಗ್ಗಾಂವ ಪೋಲಿಸ ಠಾಣೆಗೆ ಹೋಗಿ ದೂರು ಸಲ್ಲಿಸಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದಾಗ ಸದರಿ ತಾನು ಸಲ್ಲಿಸಿದ ದೂರು ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯ್ತು. ನಾನು ದೂರು ಸಲ್ಲಿಸಿದ ನಂತರ ಪೋಲಿಸರು ಪ್ರ.ವ.ವ.ನ್ನು ತಯಾರಿಸಿ, ನನ್ನ ಸಹಿ ಪಡೆದುಕೊಂಡಿರುತ್ತಾರೆಂದರೆ ಸರಿ. ಸದರಿ ಪ್ರ.ವ.ವ.ನ್ನು ನೋಡುತ್ತಿದ್ದು ಅದನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯ್ತು. ದೂರು ಬರೆದವರ ಪೂರ್ಣ ಹೆಸರು , ವಿಳಾಸ ನನಗೆ

ಗೊತ್ತಿಲ್ಲ. ನಿಪಿ-6 ನ್ನು ನಾನೇ ಬರೆಯಿಸಿರುತ್ತೇನೆ. ದೂರು ಸಲ್ಲಿಸಿದ ನಂತರ ಪೋಲಿಸರು ಮನೆಗೆ ಬಂದು ನಾನು ತೋರಿಸಿದಂತೆ ನಮ್ಮ ಅಕ್ಕಳ ಶವದ ಪಂಚನಾಮೆಯನ್ನು ಮದ್ಯಾಹ್ನ 1.15 ರಿಂದ 3.00 ವರೆಗೆ ಮಾಡಿರುತ್ತಾರೆ ಎಂದರೆ ಸರಿ. ನಂತರ ಪೋಲಿಸರು ನನ್ನ ಅಕ್ಕಳ ಕೊಲೆಯಾದ ಜಾಗವನ್ನು ನಾನು ತೋರಿಸಿದಂತೆ ಪರಿಶೀಲನೆ ಮಾಡಿ ಪಂಚರ ಸಮಕ್ಷಮ ಸ್ಥಳ ಪಂಚನಾಮೆಯನ್ನು 3.15 – 4.30 ವರೆಗೆ ಮಾಡಿ, ನಕಾಶೆಯನ್ನು ತೆಗೆದಿರುತ್ತಾರೆ ಎಂದರೆ ಸರಿ. ಆ ಕಾಲಕ್ಕೆ ಪೋಲಿಸರು ಸ್ಥಳದಲ್ಲಿದ್ದ ಒಡೆದ ಗಾಜಿನ ಬಳೆ ಚೂರುಗಳನ್ನು, ಅಲ್ಲಲ್ಲಿ ರಕ್ತ ಲೇಪಿತ ಎರಡು ತಲೆ ದಿಂಬುಗಳನ್ನು, ಗಾದಿಯ ಮೇಲಿದ್ದ ಅಲ್ಲಲ್ಲಿ ರಕ್ತ ಲೇಪಿತ ಬೆಡ್ ಶೀಟ್, ಅಲ್ಲಲ್ಲಿ ರಕ್ತ ಲೇಪಿತ ಸೊಳ್ಳೆ ಪರದೆ, ರಕ್ತ ಬಿದಿದ್ದ ಗಾದಿಯ ಕತ್ತರಿಸಿದ ಎರಡು ತುಂಡುಗಳು, ಮೃತಳ ಕೈ, ಕಣ್ಣು, ಕುತ್ತಿಗೆಗೆ ಸುತ್ತಿದ ಅಲ್ಲಲ್ಲಿ ರಕ್ತ ಲೇಪಿತ ಸೀರೆ, ಬಾಗಿಲ ಹೊಸ್ತಿಲ ಬಳಿಯಿದ್ದ ಒಂದು ಸಣ್ಣ ಹಿತ್ತಾಳೆ ದೀಪ, ಬೆಂಕಿಪೊಟ್ಟಣ ವನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ವಸ್ತುಗಳನ್ನು ಸಾಕ್ಷಿಗೆ ತೋರಿಸಿದಾಗ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮುಮಾ-4 ರಿಂದ 11 ವರೆಗೆ ಗುರುತಿಸಲಾಯ್ತು. ಸದರಿ ಪಂಚನಾಮೆ ಮತ್ತು ನಕಾಶೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-8, 9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಮತ್ತು ನಿಪಿ-9(ಎ) ಎಂದು ಗುರುತಿಸಲಾಯ್ತು. ಸಾಕ್ಷಿಗೆ ಎರಡು ಪೊಟೊಗಳನ್ನು ತೋರಿಸಿದಾಗ ಅವುಗಳನ್ನು ಪಂಚನಾಮೆಯ ಕಾಲಕ್ಕೆ ತೆಗೆದ ಪೊಟೊಗಳು ಎಂದು ಸೂಚಿಸಿದಂತೆ ಸಾಕ್ಷಿಯು ಗುರುತಿಸಿದ್ದರಿಂದ ಸದರಿ ಪೊಟೊಗಳನ್ನು ನಿಪಿ-10, 11 ಎಂದು ಗುರುತಿಸಲಾಯ್ತು. ನಿಪಿ-10, 11 ರ ಸಿಡಿಯನ್ನು ಈಗಾಗಲೆ ನಿಪಿ-2 ಎಂದು ಗುರುತಿಸಲಾಗಿದೆ.

ನಂತರ ನನ್ನ ಅಕ್ಕನ ವುಗಳಾದ ಚಾಸಾ-12 ರವರ ಮೂಲಕ ಆರೋಪಿ ಮತ್ತು ಅವನ ಹೆಂಡತಿ ನನ್ನ ಅಕ್ಕನ ಕೊಲೆಯ ಒಂದು ವಾರದ ಮುನ್ನ ಅವಳ ಮನೆಗೆ ಬಂದು ಮಹಡಿ ಮನೆಯನ್ನು ಆಫೀಸ್‌ಗಾಗಿ ಬಾಡಿಗೆ ನಾತೆಯಿಂದ ಕೇಳಿದ್ದರು ಎಂದರೆ ಸರಿ. ನಂತರ ಆರೋಪಿತರು ಒಬ್ಬ ಮಹಿಳೆಯನ್ನು ಕರೆದುಕೊಂಡು ಬಂದಿದ್ದು, ನನ್ನ ಅಕ್ಕ ಅವರಿಗೆ ಚಹಾ ವ್ಯವಸ್ಥೆ ಮಾಡಿ ಕಳುಹಿಸಿದ್ದರು ಚಾಸಾ-12 ರವರಿಂದ ಗೊತ್ತಾಯಿತು ಎಂದರೆ ಸರಿ. ನಾನು ನನ್ನ ಅಕ್ಕನ ಮನೆಗೆ ಹೋದಾಗ ಸಿಲಿಂಡರ್ ಪೈಪ್‌ನ್ನು ಬಿಚ್ಚಿದ್ದು, ಹೊಸ್ತಿಲಿನ ಮೇಲೆ ದೀಪ ಹಚ್ಚಿ ಆರಿರುವುದು ಕಂಡು ಬಂದಿತು ಎಂದರೆ ಸರಿ. ನಂತರ ನನ್ನ ಅಕ್ಕನ ಕೊಲೆಯಾದ ನಂತರ ನನ್ನ ಅಕ್ಕನ ಮಕ್ಕಳು ಆರೋಪಿತರ ಮನೆಗೆ ಹೋದಾಗ ಮನೆ ಬಂದ್ ಇತ್ತು ಎಂದರೆ ಸರಿ. ಈ ಬಗ್ಗೆ ನಾನು ಪೋಲಿಸರ ಮುಂದೆ ನನ್ನ ಮರುಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿ.

ತಾಃ06.09.2019 ರಂದು ನನ್ನ ಅಕ್ಕನನ್ನು ಕೊಂದವರನ್ನು ಪೋಲಿಸರು ಹಿಡಿದುಕೊಂಡು ಬಂದಿರುತ್ತಾರೆಂದು ಗೊತ್ತಾಗಿ ನಾನು ಠಾಣೆಗೆ ಹೋಗಿ ನೋಡಲಾಗಿ, ಆರೋಪಿ ಮತ್ತು ಅವನ ಹೆಂಡತಿ ಅಲ್ಲಿದ್ದು, ಸದರಿಯವರು ನನ್ನ ಅಕ್ಕನ ಮಹಡಿ ಮನೆಯನ್ನು ಬಾಡಿಗೆ ನಾತೆಯಿಂದ ಕೇಳುವ ನೆಪ ಮಾಡಿಕೊಂಡು, ತಾಃ16.08.2019 ರಂದು ನನ್ನ ಅಕ್ಕನ ಆಭರಣಗಳಾದ ಮುಮಾ-1 ರಿಂದ 3 ಗಳನ್ನು ಕಸಿದುಕೊಳ್ಳಲು ಪ್ರಯತ್ನಿಸಿದರು ಎಂದು ಗೊತ್ತಾಯಿತು ಎಂದರೆ ಸರಿ. ನನ್ನ ಅಕ್ಕ ಸದರಿ ಆಬರಣಗಳನ್ನು ಕೊಡದೇ ಇದ್ದಾಗ ಅವಳ ಕೈ ಕಾಲುಗಳನ್ನು ಮಂಚದ ಮೇಲೆ ಕಟ್ಟಿ , ಕಣ್ಣಿಗೆ ಸೀರೆಯಿಂದ ಬಿಗಿದು, ತಲೆದಿಂಬಿನಿಂದ ಉಸಿರುಗಟ್ಟಿಸಿ ಸಾಯಿಸಿರುತ್ತಾರೆಂದು ಗೊತ್ತಾಯಿತು ಎಂದರೆ ಸರಿ. ಆರೋಪಿ ಮತ್ತು ಅವನ ಹೆಂಡತಿ ನನ್ನ ಅಕ್ಕನನ್ನು ತಾಃ 17.08.2019 ರಂದು ಬೆಳಗಿನ ಜಾವ 3.00 ಗಂಟೆಗೆ ಸಾಯಿಸಿರಬಹುದು ಎಂದು ಗೊತ್ತಾಯಿತು ಎಂದರೆ ಸರಿ. ನನ್ನ ಅಕ್ಕಳನ್ನು ಕೊಲೆ ಮಾಡಿದ ನಂತರ ಆರೋಪಿತರು ಅವಳ ಆಭರಣಗಳಾದ ಮುಮಾ-1 ರಿಂದ 3 ಗಳನ್ನು ಕಿತ್ತುಕೊಂಡು ತಮ್ಮ ವಾಸದ ಮನೆಯಲ್ಲಿಟ್ಟು ವಿಷಯ ಗೊತ್ತಾದರೆ ತಮ್ಮನ್ನು ಉಳಿಸುವುದಿಲ್ಲ ಎಂದು ತಿಳಿದು ತಮ್ಮ ಮಕ್ಕಳನ್ನು ಮೊದಲು ಊರಿಗೆ ಕಳುಹಿಸಿಕೊಟ್ಟು, ನಂತರ ತಾವು ಸಹ ಹುಬ್ಬಳ್ಳಿಗೆ ಹೋಗಿ ಉಣಕಲ್ ಕೆರೆಯ ಹತ್ತಿರ ತಮ್ಮ ಮಕ್ಕಳನ್ನು ಕರೆಯಿಸಿ ಮೃತ ನನ್ನ ಅಕ್ಕಳನ್ನು ಕೊಲೆ ಮಾಡಿದ ಬಗ್ಗೆ ಹೇಳಿ ಆತ್ಮಹತ್ಯೆ

ಮಾಡಿಕೊಳ್ಳಲು ವಿಷಸೇವನೆ ಮಾಡಿದ್ದಾಗಿ ಗೊತ್ತಾಯಿತು ಎಂದರೆ ಸರಿ. ಆತ್ಮಹತ್ಯೆಗೆ ಯತ್ನಿಸಿ ವಿಷ ಸೇವನೆ ಮಾಡಿದ್ದರಿಂದ ಆರೋಪಿಯ ಹೆಂಡತಿ ತಾಃ25.08.2019 ರಂದು ಕಿಮ್ಸ್ ಆಸ್ಪತ್ರೆಯಲಿ ಮರಣ ಹೊಂದಿದ ಬಗ್ಗೆ ಗೊತ್ತಾಯಿತು ಎಂದರೆ ಸರಿ. ಈ ಬಗ್ಗೆ ನಾನು ತಾಃ06.09.2019 ರಂದು ಪೋಲಿಸರ ಮುಂದೆ ಮರುಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ನಿಪಿ-3 ರಿಂದ 5 ಪೊಟೊಗಳನ್ನು ನೋಡಿ, ಪೋಲಿಸರು ಶವ ಪಂಚನಾಮೆಯ ಕಾಲಕ್ಕೆ ತೆಗೆದ ಪೊಟೊಗಳು ಮತ್ತು ಅದರಲ್ಲಿ ತನ್ನ ಮೃತ ಅಕ್ಕನ ಶವವನ್ನು ನೋಡಿ ಗುರುತಿಸುತ್ತಾರೆ. ( ಮುದ್ದೆ ಮಾಲುಗಳ ಸೀಲು ತೆಗೆಯಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿದ್ದು ಅನುಮತಿ ನೀಡಲಾಯ್ತು) ಸಾಕ್ಷಿಗೆ ತನ್ನ ಮೃತ ಅಕ್ಕನ ಮೈ ಮೇಲೆ ಇದ್ದ ಸೀರೆ, ಲಂಗ, ರವಿಕೆ, ಹಾಫ್ ಸ್ವೇಟರ್, ಉಣ್ಣೆಯ ಸ್ಕಾರ್ಫ್‌ನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮುಮಾ-12 ರಿಂದ 16 ಎಂದು ಗುರುತಿಸಲಾಯ್ತು. ನಾನು ಪೋಲಿಸರ ಠಾಣೆಯಲ್ಲಿ ನೋಡಿದ ಆರೋಪಿಯು ನ್ಯಾಯಾಲಯದ ಮುಂದೆ ಇರುತ್ತಾನೆ. ನನಗೆ ನೆನಪಿನ ಕೊರತೆಯ ಕಾರಣದಿಂದ ಮೇಲೆ ಹೇಳಿದ ವಿಷಯಗಳನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಲಾಗಲಿಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಅರ್ಜಿ ಸಲ್ಲಿಸಿ ಸಮಯಾವಕಾಶ ಕೇಳಿದ್ದರಿಂದ ಸಮಯಾವಕಾಶ ನೀಡಲಾಯ್ತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ಎಫ್.ಟಿ.ಎಸ್.ಸಿ-1
ಹಾವೇರಿ.

PW- 02
CW-01

<u>ದಿನಾಂಕ:**15.03.2025** ರಂದು ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.</u>

ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:

ನನ್ನ ಮೃತ ಅಕ್ಕ ಶಾಂತಾಬಾಯಿ 4 ಜನ ಗಂಡು ಮಕ್ಕಳು ಶಿಗ್ಗಾಂವನಲ್ಲಿ ಪ್ರತ್ಯೇಕವಾಗಿ ವಾಸ ಮಾಡುತ್ತಾರೆ. ಸದರಿ ಶಾಂತಾಬಾಯಿ ಅವರ ಗಂಡು ಮಕ್ಕಳ ಮನೆಗಳಿಂದ ಅರ್ದ ಫರ್ಲಾಂಗ ದೂರ ಇರುತ್ತದೆ. ಮೃತ ಶಾಂತಾಬಾಯಿ ಮತ್ತು ಅವಳ ಗಂಡು ಮಕ್ಕಳ ಸಂಬಂದ ಚೆನ್ನಾಗಿರದ ಕಾರಣ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದರು ಎಂದರೆ ಸರಿ. ಮೃತ ಶಾಂತಾಬಾಯಿಗೆ ಅಂಗಡಿ ಮತ್ತು ಜಮೀನು ಆಸ್ತಿಗಳು ಇದ್ದವು. ಮೃತ ಶಾಂತಾಬಾಯಿ ಸಾವಿನ ಮುನ್ನ ಸದರಿ ಆಸ್ತಿಗಳು ಅವಳ ಹೆಸರಿನಲ್ಲಿ ಇದ್ದವು. ಮೃತ ಶಾಂತಾಬಾಯಿ ತನ್ನ ಗಂಡು ಮಕ್ಕಳಿಗೆ ಆಸ್ತಿ ಮತ್ತು ಬಂಗಾರ ಸರಿಯಾಗಿ ಕೊಟ್ಟಿಲ್ಲ ಎಂದು ಜಗಳ ಇತ್ತು ಎಂದರೆ ಸರಿಯಲ್ಲ. ಸದರಿ ವಿಷಯವಾಗಿ ಆಗಾಗ ಜಗಳವಾಗುತ್ತಿದ್ದು , ಪಂಚಾಯಿತಿಗಳಾಗಿದ್ದವು ಎಂದರೆ ಸಾಕ್ಷಿಯು ಒಂದು ಬಾರಿ ಮಾತ್ರ ಪಂಚಾಯಿತಿ ಆಗಿದ್ದು ವಿಷಯ ಬಗೆಹರಿದಿರಲಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ನಮ್ಮ ಸಂಬಂಧಿಕ ಎಂದರೆ ಸರಿ. ಆರೋಪಿಯು ಮೃತ ಶಾಂತಾಬಾಯಿ ಇವಳ ಗಂಡು ಮಕ್ಕಳಿಗೆ ಅವಳನ್ನು ಸರಿಯಾಗಿ ನೋಡಿಕೊಳ್ಳುವಂತೆ ಬುದ್ದಿಮಾತು ಹೇಳಿದ್ದ ಎಂದರೆ ಸರಿಯಲ್ಲ. ಆರೋಪಿಯು ಮೃತ ಶಾಂತಾಬಾಯಿ ಮಕ್ಕಳಿಗೆ ಚಿಕ್ಕಪ್ಪನಾಗಬೇಕು ಎಂದರೆ ಸರಿ.

ತಾ: 15.08.2019 ರಂದು ಮೃತ ಶಾಂತಾಬಾಯಿ ನನಗೆ ಕೊನೆಯ ಬಾರಿ ಕರೆ ಮಾಡಿದ್ದಳು. ಮೃತ ಶಾಂತಾಬಾಯಿ ಸದರಿ ಪೊನ ಕರೆಯಲ್ಲಿ ಆರೋಪಿ ಮತ್ತು ಅವನ ಹೆಂಡತಿ ಅವಳ ಮನೆಗೆ ಬಂದು ಬಾಡಿಗೆ ನಾತೆಯಿಂದ ಮನೆ ಕೇಳಿದ ಬಗ್ಗೆ ಹೇಳಿದ್ದಳು. ನಾನು ಆರೋಪಿಗೆ ಮತ್ತು ಅವನ ಹೆಂಡತಿಗೆ ಮನೆ ಬಾಡಿಗೆ ಕೊಡಬೇಡ ಎಂದು ಮೃತ ಶಾಂತಾಬಾಯಿಗೆ ಹೇಳಿದ್ದೆ. ಸದರಿ ವಿಷಯವನ್ನು ನಾನು ದೂರಿನಲ್ಲಾಗಲೀ ಮತ್ತು ಪೋಲಿಸರ ಮುಂದೆ ಹೇಳಿಕೆಯಲ್ಲಿ ಹೇಳಿಲ್ಲ. ಮೃತ ಶಾಂತಾಬಾಯಿ ಇವರ ಗಂಡು ಮಕ್ಕಳು ಮತ್ತು ಸೊಸೆಯಂದಿರು ಅವಳ ಮನೆಗೆ ಹೋಗಿ ಬಂದು ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಮೃತ ಶಾಂತಾಬಾಯಿ ಮನೆಗೆ ಚಾಸಾ-11 ಮಾತ್ರ ಬಂದು ಹೋಗಿ ಮಾಡುತ್ತಿದ್ದ ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-8 ನನಗೆ ಬೆಳಿಗ್ಗೆ 8.30 ಕರೆ ಮಾಡಿ ಮೃತ ಶಾಂತಾಬಾಯಿಗೆ ಹೃದಯಾಘಾತ ಆಗಿರುತ್ತದೆಂದು ಹೇಳಿದ್ದ. ನಾನು ಮೃತ ಶಾಂತಾಬಾಯಿ ಮನೆಗೆ ಮುಂಜಾನೆ 11.00 ಗಂಟೆಗೆ ಬಂದಿರುತ್ತೇನೆ. ನಾನು ಬಂದಾಗ ಸ್ಥಳದಲ್ಲಿ ಜನ ಸೇರಿದ್ದು ಪೋಲಿಸರು ಬಂದಿದ್ದರು. ಪೋಲಿಸರು ಒಂದುವರೆ - ಎರಡು ತಾಸಿನವರೆಗೆ ಸ್ಥಳದಲ್ಲಿ ಇದ್ದರು. ಚಾಸಾ-11 ರವರು ಪೋಲಿಸರಿಗೆ ವಿಷಯ ಮುಟ್ಟಿಸಿರಬಹುದು. ಪೋಲಿಸರು ಮೃತ ಶಾಂತಾಬಾಯಿ ಶವ , ಬಟ್ಟೆ , ಮಂಚ , ಒಡೆದ ಬಳೆಗಳು ಮುಂತಾದವುಗಳನ್ನು ಪರಿಶೀಲನೆ ಮಾಡಿದರು. ನಾನು

ಮನೆಯಿಂದಾಚೆ ಹೊರಗೆ ಬಂದಿದ್ದು ಪೊಲೀಸರು ಮತ್ತೆ ಯಾವ ಕ್ರಮ ಕೈಗೊಂಡರು ಎಂಬುದು ನನಗೆ ಗೊತ್ತಿಲ್ಲ. ನಾನು ಸ್ಥಳದಲ್ಲಿಯೇ ದೂರನ್ನು ಸಲ್ಲಿಸಿರುತ್ತೇನೆ. ನಾನು ದೂರು ಸಲ್ಲಿಸಿದಾಗ ಸಮಯ ಮದ್ಯಾಹ್ನ 12.00 ಗಂಟೆ ಆಗಿತ್ತು. ಸ್ಥಳದಲ್ಲಿ ನಾನು ಲಿಖಿತ ದೂರು ಸಲ್ಲಿಸಿದ್ದು, ಠಾಣೆಯಲ್ಲಿಯೂ ಸಹ ಬರೆದುಕೊಟ್ಟಿರುತ್ತೇನೆ. ಸ್ಥಳದಲ್ಲಿ ಮೃತ ಶಾಂತಾಬಾಯಿ ಕೊಲೆಯಾಗಿರುತ್ತದೆಂದು ದೂರು ಸಲ್ಲಿಸಿದ್ದೆ. ನಾನು ಠಾಣೆಯಲ್ಲಿ ಮದ್ಯಾಹ್ನ 12.30 ಕ್ಕೆ ದೂರು ಸಲ್ಲಿಸಿರುತ್ತೇನೆ. ಸದರಿ ದೂರು ಮೃತ ಶಾಂತಾಬಾಯಿಯ ಕೊಲೆಗೆ ಸಂಬಂದಪಟ್ಟ ದೂರು ಆಗಿರುತ್ತದೆ. ಎರಡು ದೂರಿನಲ್ಲಿರುವ ವಿಷಯ ನನಗೆ ಈಗ ನಿಖರವಾಗಿ ಗೊತ್ತಿಲ್ಲ ಎಂದರೆ ಸರಿ. ನಾನು ಸಲ್ಲಿಸಿದ ದೂರುಗಳನ್ನು ನಂತರ ಮತ್ತು ಇವತ್ತಿನವರೆಗೂ ನೋಡಿಲ್ಲ. ತಲೆದಿಂಬಿಗೆ ಲೇಪನವಾಗಿದ್ದ ರಕ್ತ ಯಾರಿಗೆ ಸಂಬಂದಪಟ್ಟಿದ್ದು ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ರಕ್ತ ಮೃತ ಶಾಂತಾಬಾಯಿಗೆ ಸಂಬಂದಪಟ್ಟಿದ್ದು ಎಂದು ನುಡಿಯುತ್ತಾರೆ. ಮೃತ ಶಾಂತಾಬಾಯಿ ಇವಳ ಮನೆಯ ಮುಂದೆ ಸೇರಿದವರ ಹೆಸರುಗಳು ನನಗೆ ಗೊತ್ತಿಲ್ಲ.

ಮೃತ ಶಾಂತಾಬಾಯಿ ಪ್ರತಿದಿನ ರಾತ್ರಿ ಮಲಗುವ ಮುನ್ನ ಬಾಗಿಲುಗಳನ್ನು ಭದ್ರಪಡಿಸಿಕೊಂಡು ಮಲಗುತ್ತಿದ್ದಳು ಎಂದರೆ ಸರಿ. ನಾನು ನೋಡಿದಾಗ ಮೃತ ಶಾಂತಾಬಾಯಿ ಮನೆಯ ಬಾಗಿಲು ಮುರಿದಿರಲಿಲ್ಲ. ಮೃತ ಶಾಂತಾಬಾಯಿ ಶವವನ್ನು ನೋಡಿದ ತಕ್ಷಣ ಕೊಲೆ ಮಾಡಿರಬಹುದೆಂದು ಮೇಲ್ನೋಟಕ್ಕೆ ಅನಿಸುತ್ತಿತ್ತು. ಚಾಸಾ-8 ಮೃತ ಶಾಂತಾಬಾಯಿಗೆ ಹೃದಯಾಘಾತವಾಗಿ ಸಾವು ಆಗಿದೆ ಅಂತಾ ಯಾಕೆ ನನಗೆ ಆ ರೀತಿ ಹೇಳಿದ ಎಂದು ನಾನು ಅವನನ್ನು ವಿಚಾರಿಸಿಲ್ಲ. ಚಾಸಾ-8 ಮೃತ ಶಾಂತಾಬಾಯಿಗೆ ಹೃದಾಘಾತವಾಗಿ ಸಾವಾಗಿದೆ ಎಂದು ಉದ್ದೇಶಪೂರ್ವಕವಾಗಿ ಸುಳ್ಳು ಹೇಳಿರುತ್ತಾನೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನು ಗಾಭರಿಯಾಗಬಾರದು ಎಂದು ನಾನು ಆ ರೀತಿ ಹೇಳಿದ್ದ ಎಂದು ನುಡಿಯುತ್ತಾರೆ. ಇದೇ ಮೊದಲ ಬಾರಿಗೆ ಈ ಬಗ್ಗೆ ನಾನು ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ ಎಂದರೆ ಸರಿ. ಆಸ್ತಿ ಮತ್ತು ಬಂಗಾರಕ್ಕೋಸ್ಕರ ಮೃತ ಶಾಂತಾಬಾಯಿ ಮಕ್ಕಳೇ ಅವಳನ್ನು ಕೊಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಷಯ ನನಗೆ ಗೊತ್ತಿದ್ದರೂ ಮೃತ ಶಾಂತಾಬಾಯಿ ಮಕ್ಕಳನ್ನು ಬಾಚಾವ್ ಮಾಡುವ ಉದ್ದೇಶದಿಂದ ಯಾರೋ ಕೊಲೆ ಮಾಡಿರುತ್ತಾರೆ ಎಂದು ಸುಳ್ಳು ದೂರು ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ನೀಡಿದ ಮೊದಲ ದೂರಿನಲ್ಲಿ ನಮೂದು ಮಾಡಿದ್ದರೂ ಸಹ ಉದ್ದೇಶಪೂರ್ವಕವಾಗಿ ಮೃತ ಶಾಂತಾಬಾಯಿ ಕೊಲೆಯ ವಿಷಯವನ್ನು ಬದಲಾಯಿಸಿ ಠಾಣೆಯಲ್ಲಿ ಇನ್ನೊಂದು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು , ಚಾಸಾ-38, 39 ರವರು ಸೇರಿ ಸಂಗನಮತ ಮಾಡಿಕೊಂಡು ಮೃತ ಶಾಂತಾಬಾಯಿ ಮಕ್ಕಳನ್ನು ರಕ್ಷಣೆ ಮಾಡುವ ಉದ್ದೇಶದಿಂದ ಸುಳ್ಳು ದೂರು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೂರು ಸಲ್ಲಿಕೆಯಾದ ನಂತರ ಪೋಲಿಸರು ನನ್ನನ್ನು ವಿಚಾರಿಸಿಲ್ಲ ಎಂದರೆ ಸರಿ. ಸ್ಥಳ ಪಂಚನಾಮೆ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಪೋಲಿಸರು ಸ್ಥಳ ಪಂಚನಾಮೆಯನ್ನು ಮದ್ಯಾಹ್ನ 1.00 ಗಂಟೆಗೆ ಮಾಡಿರುತ್ತಾರೆ. ಮೃತ

ಶಾಂತಾಬಾಯಿಯನ್ನು ತಲೆದಿಂಬಿನಿಂದ ಉಸಿರುಗಟ್ಟಿಸಿ ಸಾಯಿಸಿರಬಹುದೆಂದು ನಾನು ಊಹಿಸಿರುತ್ತೇನೆ. ಪೋಲಿಸರು ಸ್ಥಳಕ್ಕೆ ಬಂದಿರಲಿಲ್ಲ , ನಾನು ಪೋಲಿಸರಿಗೆ ಯಾವುದೇ ಜಾಗ ತೋರಿಸಿಲ್ಲ , ಯಾವುದೇ ಪಂಚರು ಸ್ಥಳಕ್ಕೆ ಬಂದಿರಲಿಲ್ಲ , ಪೋಲಿಸರು ಸ್ಥಳ ಪರಿಶೀಲನೆ ಮಾಡಿಲ್ಲ , ಯಾವುದೇ ವಸ್ತುವನ್ನು ಜಪ್ತಿ ಮಾಡಿಲ್ಲ ಎಂದರೆ ಸರಿಯಲ್ಲ. ಮುಮಾ-1 ರಿಂದ 3 ಮೃತ ಶಾಂತಾಬಾಯಿಗೆ ಸಂಬಂದಪಟ್ಟವುಗಳಲ್ಲ ಎಂದರೆ ಸರಿಯಲ್ಲ. ಆರೋಪಿಯು ಮೃತ ಶಾಂತಾಬಾಯಿ ಮನೆಯನ್ನು ಬಾಡಿಗೆಗೆ ತೆಗೆದುಕೊಳ್ಳುವ ವಿಷಯ ಚಾಸಾ-12 ರವರ ಮೂಲಕ ನನಗೆ ಗೊತ್ತಾಗಿರುತ್ತದೆಂದು ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಪೋಲಿಸರು ಮೃತ ಶಾಂತಾಬಾಯಿ ಮನೆಯಲ್ಲಿದ್ದ ಸಿಲಿಂಡರ್ ಜಪ್ತಿ ಮಾಡಿಕೊಂಡರೋ ಇಲ್ಲವೋ ನನಗೆ ಗೊತ್ತಿಲ್ಲ. ಮೃತ ಶಾಂತಾಬಾಯಿ ಪ್ರತಿದಿನ ಮನೆಯ ಹೊಸ್ತಿಲುಗಳಿಗೆ ದೀಪ ಹಚ್ಚುತ್ತಿದ್ದಳು ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಎಲ್ಲರ ಮನೆಯ ಹೊಸ್ತಿಲುಗಳಿಗೆ ಸಾಯಂಕಾಲ ದೀಪ ಹಚ್ಚುತ್ತಾರೆ ಎಂದರೆ ಸರಿಯಲ್ಲ. ದೂರು ಸಲ್ಲಿಸಿದ ನಂತರ ಪೋಲಿಸರು ಮತ್ತೆ ನನ್ನನ್ನು ಠಾಣೆಗೆ ಕರೆಸಿ ವಿಚಾರಿಸಿರಲಿಲ್ಲ. ಆರೋಪಿ ಮತ್ತು ಅವನ ಹೆಂಡತಿ ಬಂಗಾರಕ್ಕಾಗಿ ಮೃತ ಶಾಂತಾಬಾಯಿಯನ್ನು ಕೈ ಕಾಲು ಕಟ್ಟಿ ತಲೆದಿಂಬಿನಿಂದ ಉಸಿರುಗಟ್ಟಿಸಿ ಕೊಲೆ ಮಾಡಿದ ಬಗ್ಗೆ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಪೋಲಿಸರಿಂದ ನನಗೆ ಆರೋಪಿ ಮತ್ತು ಅವನ ಹೆಂಡತಿ ಮೃತ ಶಾಂತಾಬಾಯಿಯನ್ನು ಕೊಲೆ ಮಾಡಿದ ಬಗ್ಗೆ ಗೊತ್ತಾಗಿದ್ದು ಆ ರೀತಿ ನಾನು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ. ಆರೋಪಿಯು ವಿಷ ಸೇವನೆ ಮಾಡಿದ ಬಗ್ಗೆ ಪೋಲಿಸರಿಂದಲೇ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಈ ಬಗ್ಗೆ ನಾನು ಉದ್ದೇಶಪೂರ್ವಕವಾಗಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ಎಫ್.ಟಿ.ಎಸ್.ಸಿ-1
ಹಾವೇರಿ.